3) ಈಅವ್ಯವಹಾರಕ್ಕೆ ಕಾರಣರಾದವರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

1) ರಾಜ್ಯದಲ್ಲಿ ಭೂಸಾರ ಸಂರಕ್ಷಣೆ ಯೋಜನೆ ಅಂಗವಾಗಿ ರೂ. 42.702 ಲಕ್ಷಗಳ ಮೊತ್ತ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2) ಕೃಷಿ ಇಲಾಖೆಯ ಭೂಸಾರ ಸಂರಕ್ಷಣೆ ವಿಭಾಗದ ವಿವಿಧ ಮಟ್ಟದ ಅಧಿಕಾರಿಗಳು ಸಿಬ್ಬಂದಿಗಳು ಕಾರಣರಾಗಿರುತ್ತಾರೆ.

3) ಈ ಅವ್ಯವಹಾರಕ್ಕೆ ಕಾರಣರಾದ 82 ಮಂದಿ ಕೃಷಿ ಇಲಾಖೆಯ ವಿವಿಧ ಅಧಿಕಾರಿಗಳ, ಸಿಬ್ಬಂದಿಗಳ ಮೇಲೆ ಪೋಲೀಸ್ ಠಾಣೆಗಳಲ್ಲಿ ದೂರುಗಳನ್ನು ನೀಡಲಾಗಿದೆ. ಮತ್ತು ಸೇವೆಯಲ್ಲಿ ಇರುವವರನ್ನು ಅಮಾನತ್ತಿನಲ್ಲಿಡಲಾಗಿದೆ.

ಹಾವೇರಿ ಜಿಲ್ಲೆಯ ಆಡಳಿತ ಪ್ರಾರಂಭ ಮಾಡುವ ಬಗ್ಗೆ.

1603 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸರ್ಕಾರ ಈಗಾಗಲೇ ಘೋಷಣೆ ಮಾಡಿದ ಹಾವೇರಿ ಜಿಲ್ಲೆಯ ಆಡಳಿತವನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

1. ಶೀಘ್ರದಲ್ಲೇ ಪ್ರಾರಂಭ ಮಾಡಲಾಗುವುದು.

ಆಶ್ರಯ ಯೋಜನೆಯ ಪ್ರಗತಿ ಕುರಿತು.

1604 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96, 1996-97 ನೇ ಸಾಲಿನಲ್ಲಿ ನಿಗಧಿ ಮಾಡಿದ್ದ ಆಶ್ರಯ ಯೋಜನೆಯ ಆರ್ಥಿಕ ಮತ್ತು ಭೌತಿಕ ಗುರಿ ಎಷ್ಟೆಷ್ಟು, ಬಿಡುಗಡೆ ಮಾಡಿದ ಹಣ ಎಷ್ಟು, ಸಾಧಿಸಿದ ಪ್ರಗತಿ ಎಷ್ಟು?

ಆ) 1997-98ನೇ ಸಾಲಿನಲ್ಲಿ (ಜೂನ್ ಅಂತ್ಯದವರೆಗೆ) ಆಶ್ರಯ ಯೋಜನೆಯ ಆರ್ಥಿಕ ಮತ್ತು ಭೌತಿಕ ಗುರಿ ಎಷ್ಟು? 30.6.97ರ ವರೆಗೆ ಬಿಡುಗಡೆ ಮಾಡಿದ ಹಣ ಎಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ)

ಮನೆ	ಭೌತಿಕ ಗುರಿ	ಸಾಧಿಸಿದ ಪ್ರಗತಿ	ಆರ್ಥಿಕ ಗುರಿ	ಬಿಡುಗಡೆ ಮಾಡಿದ ಹಣ
1995-96	60,000	46,609	12,000.00	11,100
1996-97	25,000	2,709	4,875.00	283.00
1996-97	40,000	5,750	8,000.00	400.00
<u>ನಿವೇಶನ</u>				
1995-96	2,54,000	46,674	900.00	900.00
1996-97	2,07,326	1,15,627	750.00	1750.00
ಆ)				
ಮನೆ	4,533	-	3647.97	1146.49
ನಿವೇಶನ	1,50,000	-	1962.00	981.00

ಪ್ರಾಥಮಿಕ ಸಹಕಾರಿ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಸಂಖ್ಯೆ.

1605 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಎಷ್ಟು?

ಆ) 31-3-1997ಕ್ಕೆ ಲಾಭದಲ್ಲಿರುವ ಹಾಗೂ ಹಾನಿಯಾಗಿರುವ ಬ್ಯಾಂಕುಗಳ ಸಂಖ್ಯೆ ಎಷ್ಟು ಅವು ಯಾವುವು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ 177 ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಇವೆ.

ಆ) 31-3-97 ಕ್ಕೆ 73 ಬ್ಯಾಂಕುಗಳು ಲಾಭದಲ್ಲಿ ಇರುತ್ತವೆ. ಮತ್ತು 104 ಬ್ಯಾಂಕುಗಳು ನಷ್ಟದಲ್ಲಿರುತ್ತವೆ. 31-03-97ಕ್ಕೆ ತಾತ್ಕಾಲಿಕ ಲಾಭ ಮತ್ತು ನಷ್ಟದಲ್ಲಿರುವ ಬ್ಯಾಂಕುಗಳ ವಿವರ ಪ್ರತ್ಯೇಕವಾಗಿ ಲಗತ್ತಿಸಿದೆ.